# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಸಿ.ಸಿ. 802/2024

| | | | | |
|---|---|---|---|---|
| 01 | ಹೆಸರು | ಸತೀಶ ಬಿ ಎನ್ | ಸಿ ಡಬ್ಲೂ | **1** |
| 02 | ತಂದೆಯ ಹೆಸರು | ನಾರಾಯಣ ಸ್ವಾಮಿ | ಪಿಡಬ್ಲೂ | 1 |
| 03 | ವಯಸ್ಸು | 42 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ಕೂಲಿ | 24.02.2026. | |
| 05 | ಊರು | ಬನ್ನೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾ ಸಾ 2 ರಿಂದ 5 ರವರ ಪರಿಚಯ ಇರುತ್ತದೆ. ನನಗೆ ಆರೋಪಿಯ ಪರಿಚಯ ಇರುತ್ತದೆ. ದಿಃ23.05.2024 ರಂದು ಬೆಳಗ್ಗೆ 8.30 ಗಂಟೆಗೆ ನಾನು ಬನ್ನೂರಿನ ಎಂ ಎಂ ರಸ್ತೆ, ಗಾಣಿಗೆರೆ ಮೊಹಲ್ಲಾದಲ್ಲಿರುವ ನಮ್ಮ ಸೈಟನ್ನು ನೋಡಲು ಹೋದಾಗ ಹಿಂದೆ ಅಕ್ರಮವಾಗಿ ಆರೋಪಿ ಕಟ್ಟಿದ್ದ ಶೆಡ್ ನ ವಿಚಾರವಾಗಿ ನಾನು ಪೊಲೀಸರಿಗೆ ದೂರು ಕೊಟ್ಟ ಹಿನ್ನಲೆಯಲ್ಲಿ ಆರೋಪಿಯು ಅಲ್ಲಿಗೆ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು ನನ್ನ ಸೈಟಿಗೆ ಅಕ್ರಮ ಪ್ರವೇಶ ಮಾಡಿ ನನ್ನನ್ನು ಮುಂದೆ ಹೋಗದಂತೆ ತಡೆದು ಇನ್ನೊಮ್ಮೆ ಈ ಜಾಗಕ್ಕೆ ಬಂದರೆ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಆಗ ಚಾ ಸಾ 2 ಮತ್ತು 3 ರವರು ಬಂದು ಜಗಳ ಬಿಡಿಸಿರತ್ತಾರೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ನಿ ಪಿ 1 ರಂತೆ ದೂರು ಕೊಟ್ಟಿರುತ್ತೇನೆ. ನಂತರ ಪೊಲೀಸರು ಬಂದು ನಾನು ತೋರಿಸಿದ ಸ್ಥಳದಲ್ಲಿ ಚಾ ಸಾ 4 ಮತ್ತು 5 ರವರ ಸಮಕ್ಷಮ ಸ್ಥಳ ಮಹಜರು ಜರುಗಿಸಿರುತ್ತಾರೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿ ಪಿ 1(ಎ)ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಎಂ ಎಸ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ಚಾ ಸಾ 2 ಮತ್ತು 3 ರವರು ನಮ್ಮ ಊರಿನವರು ಇರುತ್ತಾರೆ. ಚಾ ಸಾ 4 ಮತ್ತು 5 ರವರು ಕೂಡಾ ನಮ್ಮ ಊರಿನವರೇ ಇರುತ್ತಾರೆ. ನನ್ನ ತಾಯಿ ಮತ್ತು ಅಜ್ಜಿ ಮತ್ತು ಆರೋಪಿಯ ನಡುವೆ ಸೈಟಿನ ವಿಚಾರವಾಗಿ ಸಿವಿಲ್ ದಾವೆಯಾದ ಒ ಎಸ್ 310/1996 ರಂತೆ ಇದೆ ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಾದ ತೀರ್ಪನ್ನು ಪ್ರಶ್ನಿಸಿ ಆರೋಪಿಯು ಮಾನ್ಯ ಹಿರಿಯ ದಿವಾನಿ ನ್ಯಾಯಾಲಯದಲ್ಲಿ ಆರ್ ಎ 20/2007 ರಂತೆ ಆರೋಪಿ ಮೇಲ್ಮನವಿ ಸಲ್ಲಿಸಿದ್ದು ಆರೋಪಿಯ ಪರವಾಗಿ ತೀರ್ಪು ಆಗಿರುತ್ತದೆ ಎಂದರೆ ಸರಿ. ಸದರಿ ತೀರ್ಪನ್ನು ಪ್ರಶ್ನಿಸಿ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ.

ಗಲಾಟೆಯು ದಿಃ23.05.2024 ರಂದು ಬೆಳಗ್ಗೆ 8.30 ಗಂಟೆಗೆ ಆಗಿರುತ್ತದೆ. ಗಲಾಟೆಯಾದಾಗ ನಾನು ಒಬ್ಬನೇ ಇದ್ದೆ. ಪ್ರಕರಣ ಸಿವಿಲ್ ನ್ಯಾಯಾಲಯದಲ್ಲಿರುವ ಕಾರಣ ಸದರಿ ವ್ಯಾಜ್ಯವು ಅಂತಿಮವಾಗಿ ತೀರ್ಮಾನವಾಗುವವರೆಗೂ ಸೈಟಿನ ಬಳಿ ಯಾರೂ ಹೋಗಬಾರದು ಎಂದು ಪೊಲೀಸರು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ನಿ ಪಿ 1 ರಲ್ಲಿರುವ ವಿಚಾರಗಳು ನನಗೆ ಸ್ಪಷ್ಟವಾಗಿ ತಿಳಿದಿರುತ್ತದೆ. ನಿ ಪಿ 1 ರಲ್ಲಿ ನಾನು ಮುಚ್ಚಳಿಕೆ ಬರೆದುಕೊಟ್ಟಿರುವ ಬಗ್ಗೆ ಉಲ್ಲೇಖವಿದ್ದರೂ ಕೂಡಾ ನಾನೇ ಹೋಗಿ ದಿಃ23.05.2024 ರಂದು ಆರೋಪಿಯೊಡನೆ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿವೇಶನವನ್ನು ಆರೋಪಿಯು ಲಕ್ಷ್ಮಯ್ಯ ಎನ್ನುವವರಿಂದ ದಿಃ15.09.1994 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿ ದಾಖಲೆಯು ನಕಲಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಂತೆ ಆರೋಪಿಯ ಹೆಸರಿಗೆ ಸದರಿ ಸೈಟಿನ ಖಾತೆಯಾಗಿರುತ್ತದೆ ಎಂದರೆ ಸರಿ. ಅದರಂತೆ ಆರೋಪಿಯು ತಮ್ಮ ಸೈಟಿನಲ್ಲಿ ಶೆಡ್ ನಿರ್ಮಿಸಿರುತ್ತಾರೆ, ಆಗ ನಾನು ಹೋಗಿ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿವೇಶನ ನನ್ನದಲ್ಲದ ಕಾರಣ ನಾನು ಹೇಳುವಂತೆ ಅಕ್ರಮ ಪ್ರವೇಶ ಮಾಡುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸೈಟಿನಲ್ಲಿ ಆರೋಪಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಆರ್ ಎಸ್ ಎ ಸಂ.785/2022 ದಿಃ22.01.2026 ರಂದು ವಜಾಗೊಂಡಿರುತ್ತದೆ ಎಂದರೆ ಸರಿ.

ನಾನು ಮತ್ತು ನನ್ನ ಸ್ನೇಹಿತರು ಆರೋಪಿಯ ಸೈಟ್ ಬಳಿ ನಾವೇ ಆರೋಪಿಯೊಂದಿಗೆ ಜಗಳವಾಡಿ ನಮ್ಮ ಪ್ರಭಾವ ಬೀರಿ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ಹೇಳುವಂತೆ ಆರೋಪಿಯು ಅಕ್ರಮ ಪ್ರವೇಶ ಮಾಡಿರುವುದಿಲ್ಲ ಮತ್ತು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಸಹ ಮತ್ತು ಜೀವಬೆದರಿಕೆ ಹಾಕರುವುದಿಲ್ಲ ಮತ್ತು ನನಗೆ ಅಕ್ರಮ ತಡೆ ಉಂಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 2 ಮಹಜರನ್ನು ನಾನು ಓದಿರುವುದಿಲ್ಲ. ನಿ ಪಿ 2 ಅನ್ನು ಪೊಲೀಸರು ಬರೆದಿದ್ದು ಅದಕ್ಕೆ ನಾನು ಮತ್ತು ಚಾ ಸಾ 4 ಮತ್ತು 5 ರವರು ಸಹಿ ಮಾಡಿರುತ್ತೇವೆ. ಆರೋಪಿಯು ನನ್ನೊಂದಿಗೆ ಯಾವುದೇ ಗಲಾಟೆ ಮಾಡದಿದ್ದರೂ ಕೂಡಾ ನಾನು ಆರೋಪಿಯ ವಿರುದ್ಧ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ನಿ ಪಿ 1 ಅನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.